## ಆಯುರ್ವೇದಕ್ಕೇಕೆ ತಾತ್ಸಾರ?

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ಅಮ್ಮಮ್ಮ ಕ್ಯಾನ್ಸರ್ ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಹೊರಬರುವಾಗ ನರ್ಸ್ ಆಯುರ್ವೇದ ಚಿಕಿತ್ಸೆ ಪಡೆಯಲು ಒಂದು ಚೀಟಿಯನ್ನು ಹರ್ಷನ ಕೈಗೆ ನೀಡುತ್ತಾಳೆ. ಹರ್ಷ ಅದನ್ನು ನೋಡಿ ಓದಿ ತಕ್ಷಣ ಮಡಚಿ ಮುದ್ದೆಮಾಡಿ ಅಲ್ಲಿಯೇ ಬಿಸಾಕುತ್ತಾನೆ. ಹಾಗೆ ಬಿಸಾಕುವಾಗ ಅವನ ಮುಖದಲ್ಲಿ ಆಯುರ್ವೇದ ಚಿಕಿತ್ಸೆ ಬಗ್ಗೆ ಒಂದು ರೀತಿಯಲ್ಲಿ ತಾತ್ಸಾರ ಭಾವನೆ ವ್ಯಕ್ತವಾಯಿತು.

ಚಿಕಿತ್ಸಾ ಪದ್ಧತಿಯೊಂದನ್ನು ಒಪ್ಪುವುದು ಬಿಡುವುದು ಅವರವರಿಗೆ ಬಿಟ್ಟ ವಿಷಯ. ಈ ನಿಟ್ಟಿನಲ್ಲಿ ಬಲವಂತ ಮಾಡಲಾಗದು. ಆದರೆ, ನಿಕೃಷ್ಟವಾಗಿ ನೋಡುವುದು ವೈಚಾರಿಕ ಲಕ್ಷಣವಲ್ಲ. ಸೃಜನಶೀಲ ಧಾರಾವಾಹಿ ಎಂದು ಹೇಳಲಾದ ಕನ್ನಡತಿ ಧಾರಾವಾಹಿಗೆ ಇಂತಹ ಅಸೂಕ್ಷ್ಮ ದೃಶ್ಯ ರುಚಿಸುವುದಿಲ್ಲ.

—ರಮಾನಂದ ಶರ್ಮಾ, ಬೆಂಗಳೂರು

## ಸಿಹಿ ಸಂಭ್ರಮಕ್ಕೆ ಕಹಿಯ ಸಿಂಚನ

ಝೀ ಕುಟುಂಬದ ಮತ್ತೊಂದು ಉತ್ಸವ ಇತ್ತೀಚೆಗೆ ಅದ್ದೂರಿಯಾಗಿ ನೆರವೇರಿತು. ಅಂತಿಮ ಹಂತದಲ್ಲಿ ನಡೆದ ಗೌರವಾರ್ಪಣೆ ವಿಶಿಷ್ಟವಾಗಿತ್ತು. ದೀರ್ಘ ಕಾಲ ಕನ್ನಡ ಚಿತ್ರರಂಗದಲ್ಲಿ ದುಡಿದ ಹಿರಿಯ ನಟಿಯರಾದ ಪದ್ಮಾವಾಸಂತಿ, ವಿನಯಾಪ್ರಸಾದ್, ಉಮಾಶ್ರೀ, ವಿಜಯಲಕ್ಷ್ಮಿ ಸಿಂಗ್ ಹಾಗೂ ಸುಧಾರಾಣಿ ಅವರ ಕಲಾಸೇವೆಯನ್ನು ಸ್ಮರಿಸಿ ಗೌರವಿಸಲಾಯಿತು.

ವಿವಿಧ ಧಾರಾವಾಹಿಗಳ ಕಲಾವಿದೆಯರಾದ ಅನಿಕಾ , ಅದಿತಿ, ದಾಮಿನಿ, ಕೀರ್ತನಾ ಹಾಗೂ ಮೀರಾ 'ಮಾನಸ ಸರೋವರ...', 'ಮಡಿಕೇರಿಯಾದರೇನು...?', 'ಪುಟ್ಟಮಲ್ಲಿ...' ಮತ್ತು 'ಹಸಿರು ಗಾಜಿನ ಬಳೆಗಳೇ...' ಗೀತೆಗಳನ್ನು ಸುಂದರವಾಗಿ ಮರು ಸೃಷ್ಟಿಸಿ ಮನಗೆದ್ದರು. ಪರಸ್ಪರರ ಸವಿ ನೆನಪುಗಳನ್ನು ಸ್ಮರಿಸಲಾಯತು. ರಾಜಣ್ಣ, ಪುಟ್ಟಣ್ಣ, ವಿಷ್ಣು ಅವರನ್ನು ಅಭಿನಂದಿತರು ನೆನಪಿಸಿಕೊಂಡರು.

ನಿರೂಪಕ ಮಾಸ್ಟರ್ ಆನಂದ್ ಮತ್ತು ದಿಲೀಪ್ ರಾಜ್ 'ಮಣಿಯಲೆನ್ನ ಶಿರವು ನಿನ್ನ ಚರಣ ಧೂಳಿ ತಳದಲಿ' ಎಂಬಂತೆ ಶಿರಸಾಷ್ಟಾಂಗ ನಮಸ್ಕಾರ ಮಾಡಿ ಗೌರವ ತೋರಿದರೆ ಅನುಶ್ರೀ ಸೈಲೆಂಟಾಗಿ ಸೈಡಿಗೆ ಸರಿದುನಿಂತರು. ಆನಂತರ ಡ್ಯಾನ್ಸ್ ಮಾಡುತ್ತಾರೆ ಎಂದ ಕೂಡಲೇ ಧಾರಾವಾಹಿಗಳ ನಟರೆಲ್ಲ ವೇದಿಕೆಗೆ ನುಗ್ಗಿ ಹಿರಿಯ ಕಲಾವಿದೆಯರ ಕೈ ಹಿಡಿದು ನರ್ತಿಸಲು ಆರಂಭಿಸಿದರು. ಕೊನೆಯ ಆ ಕ್ಷಣ ವೀಕ್ಷಕರಲ್ಲಿ ಕಹಿ ಅನುಭವವನ್ನು ನೀಡಿತು.

—ವಾ. ಮುರಳೀಧರ, ತೀರ್ಥಹಳ್ಳಿ

ವಾರದ ಪತ್ರ

## ಕಥೆಗೆ ನೀತಿ ಇರಲಿ

ನಮಸ್ಕಾರ, ನಾನು 7ನೇ ತರಗತಿ ಓದುತ್ತಿದ್ದೇನೆ. ಹೋದವರ್ಷ ಕೊರೊನಾ ದಾಳಿಯ ಸಂದರ್ಭದಲ್ಲಿ ಶಾಲೆಗೆ ಅನಿರೀಕ್ಷಿತ ರಜೆ ಸಿಕ್ಕಿತು. ಟೀವಿಗಳು ಅನೇಕ ಪೌರಾಣಿಕ–ಐತಿಹಾಸಿಕ ಕಥೆಗಳ ಧಾರಾವಾಹಿಗಳನ್ನು ಪ್ರಸಾರ ಮಾಡಿದವು. ಇದು ನಮ್ಮ ಜ್ಞಾನಾರ್ಜನೆಗೆ ಹಲವು ಬಗೆಯಲ್ಲಿ ಅನುಕೂಲವಾಯಿತು. ಎರಡನೇ ಅಲೆಯಿಂದ ಈಗ ಮತ್ತೆ ಶಾಲೆಗೆ ರಜೆ ಬಂದಿದೆ. ಆದರೆ ಟೀವಿಗಳು ಪ್ರೀತಿ–ಪ್ರೇಮ, ದ್ವೇಷ, ಕೊಲೆ, ಮದ್ಯಪಾನ ದೃಶ್ಯದ ಪ್ರಧಾನ ಕಥೆಗಳನ್ನೇ ಪ್ರಸರಿಸುತ್ತಿವೆ. ಇದು ನಮ್ಮಂತ ಶಾಲಾ ಮಕ್ಕಳಿಗೆ ಯಾವ ರೀತಿಯ ಅರಿವನ್ನು ಅವು ಮೂಡಿಸುತ್ತವೆ? ನೀತಿಯುಳ್ಳ ಧಾರಾವಾಹಿ ಮತ್ತು ಸಿನಿಮಾಗಳನ್ನು ಪ್ರಸಾರ ಮಾಡಬೇಕು ಎಂದು ವಿನಯದಿಂದ ವಿನಂತಿಸುತ್ತೇನೆ.

—ಇಂಚರ ದತ್ತ ಎಂ.ಎಸ್., ಕೆ.ಆರ್.ಪುರ

## ಹಿಂಸೆ... ಹಿಂಸೆ... ಮತ್ತೂ ಹಿಂಸೆ...

ಸಂಜೆ ಮನೆಗೆ ಬಂದು ಉಲ್ಲಾಸದಿಂದ ಸ್ವಲ್ಪ ಹೊತ್ತು ಧಾರಾವಾಹಿಗಳನ್ನು ನೋಡಿ ಮನಸ್ಸು ಹಗುರ ಮಾಡಿಕೊಳ್ಳೋಣವೆಂದರೆ ಅದರಲ್ಲಿ ಮನೋರಂಜನೆ–ಹಾಸ್ಯ ಇಲ್ಲದಂತಾಗಿ ಬರೀ ಹಿಂಸೆಯೇ ರಾರಾಜಿಸುತ್ತಿದೆ. ಎಲ್ಲ ಕಥೆಗಳಲ್ಲೂ ಮನೆಹಾಳು ಹೆಂಗಸರದೆ ಕಾರುಬಾರು. ಅದರಲ್ಲೂ ಕಲರ್ಸ್ ಕನ್ನಡದ 'ಗೀತಾ'ದ ಬಾನು, 'ಗಿಣಿರಾಮ'ದ ಶಿವರಾಮನ ತಾಯಿ, 'ನನ್ನರಸಿರಾಧೆ'ಯ ಮೀನಾಕ್ಷಿ 'ನಮ್ಮನೆಯುವರಾಣಿ'ಯ ಅಹಲ್ಯಾ ಪಾತ್ರಗಳು ಟೀವಿ ಪರದೆಯ ಮೇಲೆ ಕಾಣಿಸಿಕೊಂಡರೆ ವೀಕ್ಷಕರಲ್ಲೇ ಕೋಪ ಬರುತ್ತದೆ. ಅವರ ಅತಿರೇಕವನ್ನು ಎಷ್ಟು ದಿನ ಸಹಿಸಬೇಕು. ಕಥೆಗಾರರು ಅವರಿಗೂ ಮಾನವೀಯ ಸ್ಪರ್ಶ ನೀಡಿ ನಮ್ಮ ಹಿಂಸೆಯನ್ನು ಕಡಿಮೆ ಮಾಡಲಿ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಪ್ರಾದೇಶಿಕ ಕಂಪಿನ ಸೊಗಸು

ಕಲರ್ಸ್ ಕನ್ನಡದ 'ಗಿಣಿರಾಮ' ಉತ್ತರಕರ್ನಾಟಕದ ಕಂಪನ್ನು ಸೊಗಸಾಗಿ ಮೂಡಿಸುತ್ತಿದೆ. ಹೋಳಿಹಬ್ಬ, ಯುಗಾದಿ ಹಬ್ಬದ ಸಂಪ್ರದಾಯವನ್ನು ನವಿರಾಗಿ ಚಿತ್ರೀಕರಣ ಮಾಡಿದ್ದಾರೆ. ಎಲ್ಲಾ ಪಾತ್ರಗಳು ಜೀವ ತುಂಬಿ ನಟಿಸುತ್ತಿದ್ದಾರೆ. ಹೆಸರುಗಳು ಸೊಗಸಾಗಿವೆ.

ಎಲ್ಲಾ ಧಾರವಾಹಿಗಳಂತೆ ಇಲ್ಲೂ ಖಳಪಾತ್ರಗಳು ಇಂದಿನ ಜಾಯಮಾನಕ್ಕೆ ತಕ್ಕಂತೆ ತರುತ್ತಿದ್ದಾರೆ. ತೋರಿಸಿದ್ದ ದೃಶ್ಯಗಳನ್ನೇ ಮತ್ತೆ ಮತ್ತೆ ತೋರಿಸುವದನ್ನು ಕಡಿಮೆ ಮಾಡಿದರೆ ಚೆನ್ನಾಗಿರುತ್ತೆ.

—ಕಮಲಾದೇವಿ ಆರ್. ಹಳ್ಳೂರ್ ಬೆಂಗಳೂರು

## ಮೈ ಮರೆಸಿದ ಗೋಡ್ಖಿಂಡಿ

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ' 150ನೇ ಸಂಚಿಕೆಯಲ್ಲಿ ವಿಶೇಷ ಅತಿಥಿಯಾಗಿ ಪ್ರವೀಣ್ ಗೋಡ್ಖಿಂಡಿ ಅವರನ್ನು ಆಹ್ವಾನಿಸಲಾಗಿತ್ತು. ಸಿಹಿ ಕಹಿ ಚಂದ್ರು ಅವರನ್ನು ಕಲಿಯುಗದ ಕೃಷ್ಣ ಎಂದು ಅರ್ಥಪೂರ್ಣವಾಗಿ ಪರಿಚಯಿಸಿದರು. ನಾವು ಅವರ ಕೊಳಲಿನ ಮಾಂತ್ರಿಕ ಶಕ್ತಿಯ ನಾದದ ಸುಧೆಯನ್ನು ಆಲಿಸುವುದರಲ್ಲಿ ತಲ್ಲೀನರಾಗಿ ಅಡಿಗೆ ತಯಾರಿಯ ಕ್ರಮವನ್ನು ನೋಡುವ ಕಡೆ ಹೆಚ್ಚಿನ ಗಮನ ಹರಿಸಲು ಸಾಧ್ಯವಾಗಲಿಲ್ಲ. ಅವರನ್ನು ಬೊಂಬಾಟ್ ಭೋಜನಕ್ಕೆ ಆಹ್ವಾನಿಸಿ ಮಧುರವಾದ ಕೊಳಲಿನ ವಾದನವನ್ನು ಕೇಳುವಂತೆ ಮಾಡಿದಕ್ಕೆ ಧನ್ಯವಾದಗಳು.

—ಕೆ.ಎಸ್. ಸವಿತ,ಬೆಂಗಳೂರು.

ಸಿಹಿ ಕಹಿ ಮಿಶ್ರಣ: 'ಬೊಂಬಾಟ್ ಭೋಜನ' 'ಸಿಹಿ ಕಹಿ' ಮಿಶ್ರಣವಾಗಿದೆ. ಚಂದ್ರು ಅವರ ವಿನೋದ ತುಂಬಿದ ಮಾತು ಸಿಹಿಯಾಗಿದ್ದರೆ ಕಾರ್ಯಕ್ರಮಕ್ಕೆ ಬರುವ ಕೆಲವು ವಿಶೇಷ ಅತಿಥಿಗಳ ಮಾತಿನ ಭರಾಟೆ ಕಹಿಯಾಗಿರುತ್ತದೆ.

'ಆಯಿಲ್ ಪೌರ್ ಮಾಡಿ, ಕೊಕನಟ್ ಗ್ರೇಂಡ್ ಮಾಡಿಟ್ಕೊಂಡು, ಸಾಲ್ಟ್ ರೆಡಿ ಇಟ್ಕೊಂಡು ಕ್ಯಾಪ್ಸಿಕಮ್, ಕ್ಯಾಬೇಜ್ ಹೆಚ್ಚಿ ರೆಡಿ ಆದ್ಮೇಲೆ ಶುಗರ್ ಸ್ವಲ್ಪ ಮಿಕ್ಸ್ ಮಾಡ್ಕೋಬೇಕು. ಅಬ್ಬ–ಅರಿದಿನಕ್ಕೆ (ಹಬ್ಬ ಹರಿದಿನ) ಸ್ಪೆಷಲ್ ಪ್ರೊಗ್ರಾಮ್ ಸ್ಪೆಷಲ್ ಅಡಿಗೆ' ಬೇರೆ ಇರುತ್ತೆ.

ಆದರೆ, ಅವರಿಗೆ ಜೀರಿಗೆ, ಲವಂಗ ಶಬ್ದಗಳಿಗೆ ಇಂಗ್ಲಿಷ್ ಪದಗಳು ಗೊತ್ತಿಲ್ಲ ಅನಿಸುತ್ತದೆ. ಅದನ್ನು ಕನ್ನಡದಲ್ಲಿ ಹಾಗೇ ಹೇಳುತ್ತಾರೆ. ಕನ್ನಡಮ್ಮ 'ಧನ್ಯೋಸ್ಮಿ'. ಇದು ಕನ್ನಡ ಕಾರ್ಯಕ್ರಮ ಆದ್ದರಿಂದ ಸರಳ/ಸ್ಪಷ್ಟ ಕನ್ನಡ ಬಲ್ಲವರನ್ನು ಕರೆಸುವುದು ಸೂಕ್ತ.

—ಶ್ರೀಧರ್, ಬೆಂಗಳೂರು

## ಒಳ್ಳೆಯ ಯೋಚನೆ ಬರಲಿ

ಕಲರ್ಸ್‌ನ 'ಕನ್ನಡತಿ' ಸೀರಿಯಲ್ ಚೆನ್ನಾಗಿ ಶುರುವಾಯಿತು. ಬರುತ್ತಾ ಬರುತ್ತಾ ಬೇರೆ ದಾರವಾಹಿಗಳ ಬೆನ್ನುಹತ್ತಿತು. ಒಂದು ಸುಂದರ ಕಥೆ, ಒಳ್ಳೆಯ ಮನರಂಜನೆ, ಒಳ್ಳೆಯ ಸಂದೇಶ ಕೊಡಬಹುದು. ಆದರೆ ಯಾರದೋ ದುಡ್ಡು ಆಸ್ತಿಗೆ ಬಡಿದಾಡೋ ಕುಟುಂಬ. ಕೆಟ್ಟ ಆಲೋಚನೆ ಮತ್ತು ಕಲ್ಪನೆ ಮಾಡುವಂತೆ ಒಳ್ಳೆಯ ಆಲೋಚನೆ ಕಲ್ಪನೆಗೆ ಅವಕಾಶ ಏಕಿಲ್ಲ? ಯಾಕೆ ಯಾವಾಗಲೂ ಕೆಟ್ಟವರನ್ನ ವಿಜೃಂಭಿಸುತ್ತೀರಿ?

—ಉಷಾ ಮೂರ್ತಿ ಬೆಂಗಳೂರು